ಮುಟ್ಟುವ ಅಗತ್ಯ ಕಾಣುತ್ತ ಹೋಯಿತು. ಹಿಂದಿ ಒಂದಿಷ್ಟೆಲ್ಲ ಬರುತ್ತಿತ್ತು. ಪತ್ರಿಕೆಯ ದೆಸೆಯಿಂದ ಕನ್ನಡದ ತೀರಾ ಹಳೆಹಳೆಯ ಪುಸ್ತಕಗಳು, ದಾಖಲೆಗಳನ್ನು ಅರಸುತ್ತ ಸಾಕಷ್ಟು ಸುತ್ತಾಡಿದುದಾಯಿತು. ಬೀದಿ ಬದಿಯ ಹಳೆಯ ಪುಸ್ತಕಗಳೆಷ್ಟೋ ನನಗೆ ದಾರಿ ತೋರಿದವು. ಅಂತರ್ಜಾಲ ವ್ಯವಸ್ಥೆ ಶುರುವಾಗುತ್ತಿದ್ದಂತೆ ನನಗೆ ಹಬ್ಬವೆನಿಸತೊಡಗಿತು. ಬಲು ದೂರದೂರದ ಎಷ್ಟೊಂದು ಅಪರೂಪದ ಲೇಖಕರು, ಕೃತಿಗಳು, ಅಧ್ಯಯನಗಳು, ವಿಚಾರ ವಿಮರ್ಶೆಗಳು ಸಿಗತೊಡಗಿ ಇದೊಂದು ಬಲು ದೊಡ್ಡ ಜಗತ್ತು ಅನಿಸತೊಡಗಿತು. ನನಗೆ ಪತ್ರಿಕೆಯ ಕೆಲಸ ಹಚ್ಚಿಕೊಂಡುದು ಸಾರ್ಥಕವೇ ಅನಿಸಿತು. ಅಷ್ಟು ಖುಷಿಯನ್ನ ಅನೇಕ ಸಲ ಅನುಭವಿಸಿದ್ದೇನೆ. ನನ್ನ ಈ ಖುಷಿಯನ್ನು ನನ್ನ ಸಂಚಿಕೆಗಳಲ್ಲಿ ಕಣ್ಣಾಡಿಸಿದರೆ ತಿಳಿಯುತ್ತದೆ. ಕನ್ನಡದಲ್ಲೂ ಇಂಗ್ಲೀಷಿನಲ್ಲೂ ವರ್ಷಕ್ಕೆ ನಾಲ್ಕು ಸಂಚಿಕೆ ತರುವುದು ಶ್ರಮದ ಕೆಲಸವಾದರೂ, ಅದೊಂದು ಬದುಕಿನ ಅವಿಭಾಜ್ಯ ಅಂಗವಾಗಿ ಹೋಯಿತು. ಆಸಕ್ತಿಯಿಂದ ಓದುವವರಿಗೆ ಖಂಡಿತ ಸೊಗಸಿನ ಉಣಿಸು ಈ ಸಂಚಿಕೆಗಳಲ್ಲಿದೆ. ಪತ್ರಿಕೆ ನನಗೆ ಕನ್ನಡದಾಚೆ ಸಾಕಷ್ಟು ಸ್ನೇಹಿತರನ್ನ ತಂದುಕೊಟ್ಟಿದೆ. ಪತ್ರಿಕೆ ತಡವಾದರೆ ಕರೆಮಾಡಿ ಕೇಳುವ ದನಿಗಳಿವೆ. ನನಗೆ ಕನ್ನಡವೇ ನಿರಾಳ ಮೌನದ ವಾತಾವರಣವಾಗಿದೆ. ನಮ್ಮ ಹತ್ತಿರದ ಗೆಳೆಯರು ಖಂಡಿತ ಜೊತೆಗಿದ್ದಾರೆ. ಪತ್ರಿಕೆ ನಡೆಸುತ್ತ ಮೂವತ್ತು ವರ್ಷಗಳು ಕಳೆದಿರುವ ಸಮಯ ಖಂಡಿತ ಸುಮ್ಮನೆ ಏನೋ ಅನ್ನುವಂಥದಲ್ಲ. ಆ ಬಗೆಯ ವಿಶ್ವಾಸ ನನಗಿದೆ. ನಿರಾಸೆಗಳಿದ್ದೇ ಇರುತ್ತವೆ. ಅವನ್ನೇ ಮುಂದಿಟ್ಟುಕೊಂಡು ಕೂಡುವುದಲ್ಲ, ನಮಗೆ ಸಾಧ್ಯವಾದದ್ದು, ನಮಗೇ ತೃಪ್ತಿ ನೀಡುವಂಥದ್ದನ್ನು ಮಾಡಲು ಯಾರ ಹಂಗಿಲ್ಲವಲ್ಲ.

**◆ ಮಕ್ಕಳಿಗಾಗಿ ಬರೆಯುವ ಅನೇಕ ಲೇಖಕರಿಗೆ ತಮ್ಮ ಬರವಣಿಗೆಗೆ ಸಂಬಂಧಿಸಿದಂತೆ ತಾತ್ವಿಕ ನೆಲೆಗಟ್ಟು ಸ್ಪಷ್ಟವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲೊಂದು ಪ್ರಶ್ನೆ – ಮಕ್ಕಳ ಸಾಹಿತ್ಯದ ಪ್ರಮುಖ ಉದ್ದೇಶಗಳೇನು?**

ಸಾಹಿತ್ಯ ಅನ್ನೋದೆ ಒಂದು ತೀರಾ ಸಹಜದ ಸೃಜನಶೀಲ ಚಟುವಟಿಕೆ. ನಮ್ಮ ಬರವಣಿಗೆಯಿಂದ ಏನೋ ನಿರ್ದಿಷ್ಟ ಉಪಯೋಗವಾಗಬೇಕು ಅಂತ ಅಂದುಕೊಂಡರೆ ಅದು ಸರಕೇ ಆಗುತ್ತದೆ. ನನ್ನೊಳಗಿನದಕ್ಕೆ ದನಿಯಾಗುವುದಕ್ಕೆ ಬರವಣಿಗೆ ಒಂದು ದಾರಿ. ಮಕ್ಕಳ ಸಾಹಿತ್ಯವೆಂದೊಡನೆ ಕಲಿಕೆ, ಮಾರ್ಗದರ್ಶನ, ಮಾಹಿತಿ ನೀಡುವುದು,

ಆನಂದ ಪಾಟೀಲ: ನಾಗಲಿಂಗ ಯೋಗಿಯ ನವಲಗುಂದ ಹುಟ್ಟಿದ ಊರು. ಜನಪದ ಸಾಹಿತ್ಯದಲ್ಲಿ ಎಂ.ಎ., ಪಿಎಚ್.ಡಿ., ಮಕ್ಕಳ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಆಕಾಶವಾಣಿಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರು. ಸದ್ಯದ ವಿಶ್ರಾಂತ ಜೀವನ ಧಾರವಾಡದಲ್ಲಿ. 11 ಮಕ್ಕಳ ಕಾವ್ಯ ಪುಸ್ತಕಗಳು, 15 ಗದ್ಯ (ಕಥೆ, ಕಾದಂಬರಿ, ಇತರೆ) ಕೃತಿಗಳು. ಎರಡು ಅನುವಾದಗಳು, ನಾಟಕದ ಒಂದು ಸಂಗ್ರಹ, ಮಕ್ಕಳ ಸಾಹಿತ್ಯದ ಅಧ್ಯಯನ–ವಿಮರ್ಶೆಯ 11 ಕೃತಿಗಳು (ಎರಡು ಇಂಗ್ಲಿಷಿನಲ್ಲಿ), ಸಂಪಾದಿತ ಕೃತಿಗಳು 2, ಮಕ್ಕಳ ಸಾಹಿತ್ಯದ ಅಧ್ಯಯನ ವಿಮರ್ಶೆಗೆ ಮೀಸಲಾದ ಅಂತರ್ಜಾಲ ಪತ್ರಿಕೆಗಳು 2 ('ಮಕ್ಕಳ ಸಾಹಿತ್ಯ : ಓದು ಒಲವು', Children's literature: Sheer Joy). ರಾಜ್ಯ–ರಾಷ್ಟ್ರ ಮಟ್ಟದ ಹಲವಾರು ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸುವಿಕೆ.. ಕೇಂದ್ರ ಸಾಹಿತ್ಯ ಅಕಾಡೆಮಿ ಬಾಲ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಿ.ಬಿ. ಹೊಂಬಳ ಪುರಸ್ಕಾರ, ಲದ್ವಾ ಪ್ರತಿಷ್ಠಾನ ಪುರಸ್ಕಾರ, ಮುಂತಾದ ಗೌರವಗಳು ಲಭಿಸಿವೆ.

'ಅಜ್ಜಿ ಮನೆ ಬಹಳ ದೂರ', 'ಹೂ', 'ಹಕ್ಕಿ ಪುಟಾಣಿ', 'ಹೂ ಅಂದ್ರ ಹೂ', 'ಅಜ್ಜಿ ಬಿಡಿಕಾಳ್ ಬಿಡಿಕಾಳು', 'ಪುಟ್ಟ ಪುಟ್ಟ ಪಾಪು ಪುಟಾಣಿ ಪಾಪು', 'ಪುಟ್ಟಕ್ಕನ ಪತ್ರಗಳು', 'ಬೆಳದಿಂಗಳು', 'ಡಂ ಡಂ ಊರಿಗೆ ಡಿಂ ಡಿಂ ಗಾಡಿ', 'ನನ್ನ ಪ್ರಾಣಿ ಕತೆಗಳು', 'ಮತ್ತೆ ಬಂತು ಚಂಪೂ', 'ಮಕ್ಕಳ ಸಾಹಿತ್ಯ ಶತಮಾನ', 'ಹೀಗೇ ಖುಷಿ ಕೊಟ್ಟವು', 'ಅಲರು', 'ಮುಗುಳು' – ಇವು ಆನಂದ ಪಾಟೀಲರ ಕೆಲವು ಕೃತಿಗಳು.